ದೂರವಾಣಿ: 0836-2215328

Phone : 0836-2215328

# ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

# KARNATAK UNIVERSITY, DHARWAD

## Scholarship Section

*Email : scholarship@kud.ac.in*

Azadi Ka Amrit Mahotsav

ನಂ:ಕವಿವಿ/ಶಿವೇ/2022/589

ದಿನಾಂಕ: - 1 DEC 2022

## -:ಸುತ್ತೋಲೆ:-

ವಿಷಯ:-ಪ್ರೊ. ಎ. ಎಂ. ಪಠಾಣ, ಸನ್ಮಾನ ಸಮಿತಿಯ ಪ್ರೊ. ಎ. ಎಂ. ಪಠಾಣ ಶಿಷ್ಯವೇತನ ಮಂಜೂರಾತಿಗಾಗಿ ಅರ್ಜಿ ಅಹ್ವಾನಿಸಿದ ಕುರಿತು

ಉಲ್ಲೇಖ:- 1) ಸಿಂಡಿಕೇಟ್ ನಿರ್ಣಯ ನಂ.28 ದಿನಾಂಕ: 09-06-2004.

2) ವಿದ್ಯಾವಿಷಯಕ ಪರಿಷತ್ ಸಭೆಯ ನಿರ್ಣಯ ನಂ.33 ದಿನಾಂಕ: 24-07-2004.

3) ಕುಲಪತಿಗಳ ಆದೇಶ ದಿನಾಂಕ:18-11-2022

*****

ಪ್ರಸ್ತುತ ಸನ್ **2021-22ನೇ** ಸಾಲಿಗೆ ಸ್ನಾತಕೋತ್ತರ ಪ್ರಥಮ ವರ್ಷಕ್ಕೆ (1ನೇ ಮತ್ತು 2ನೇ ಸೆಮಿಸ್ಟರ್‌ಗೆ) ಕಲಾ (**Languages, Music**) ನಿಖಾಯದ ಅಧ್ಯಯನದಲ್ಲಿ ಪ್ರವೇಶ ಪಡೆದು ಸನ್ 2022-23ನೇ ಸಾಲಿಗೆ ಅಂತಿಮ (**3ನೇ** ಮತ್ತು **4ನೇ** ಸೆಮಿಸ್ಟರ್‌ದಲ್ಲಿ) ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ **ಕರ್ನಾಟಕ ವಿಶ್ವವಿದ್ಯಾಲಯದ 2021-22ನೇ ಸಾಲಿನ Best Student** ಎಂದು ನಿರ್ಣಯಿಸಲ್ಪಡುವ ವಿದ್ಯಾರ್ಥಿಗೆ ಪ್ರೊ.ಎ.ಎಂ.ಪಠಾಣ ಶಿಷ್ಯವೇತನ ಮಂಜೂರು ಮಾಡಲು ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆದ್ದರಿಂದ ವಿದ್ಯಾರ್ಥಿಗಳು ಈ ಶಿಷ್ಯವೇತನಕ್ಕೆ ಅರ್ಜಿ ಸಲ್ಲಿಸುವಂತೆ ಈ ಮೂಲಕ ತಿಳಿಸಲಾಗಿದೆ.

**1.** ಕಲಾ (**Languages, Music.**) ನಿಖಾಯದ ಸ್ನಾತಕೋತ್ತರ ಪ್ರಥಮ ವರ್ಷದ (1 ಹಾಗೂ 2ನೇ ಸೆಮಿಸ್ಟರ್) ಪದವಿಯನ್ನು 2021-22 ರಲ್ಲಿ ಪಾಸಾಗಿ ಪ್ರಸ್ತುತ 2022-23ನೇ ಶೈಕ್ಷಣಿಕ ವರ್ಷದಲ್ಲಿ ಅಂತಿಮ ವರ್ಷದ ಸ್ನಾತಕೋತ್ತರ ಪದವಿಯಲ್ಲಿ **3ನೇ** ಮತ್ತು **4ನೇ** ಸೆಮಿಸ್ಟರನಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ಈ ಶಿಷ್ಯವೇತನಕ್ಕೆ ಅರ್ಜಿ ಸಲ್ಲಿಸಬಹುದು.

**2.** ಅರ್ಹತೆ:-

ಶಿಷ್ಯವೇತನಕ್ಕೆ ಈ ಕೆಳಗಿನ ಅರ್ಹತೆಗಳನ್ನಾಧರಿಸಿ ವಿದ್ಯಾರ್ಥಿಯನ್ನು ಆಯ್ಕೆ ಮಾಡಲಾಗುವುದು.

ಅ) ವಿದ್ಯಾರ್ಹತೆ ಬ) ಇತರೆ ಚಟುವಟಿಕೆಗಳು ಕ) ವೈಯಕ್ತಿಕ ಸಂದರ್ಶನ

ಅ) ವಿದ್ಯಾರ್ಹತೆ: (Educational Qualifications):- ಎಸ್.ಎಸ್.ಎಲ್.ಸಿ.ಯಿಂದ ಸ್ನಾತಕೋತ್ತರ ಪ್ರಥಮ ವರ್ಷದ ಪದವಿ (1st and 2nd semester) ಯನ್ನು ಪ್ರಥಮ (1st attempt) ಯತ್ನದಲ್ಲಿ, ಪ್ರಥಮ (1st Class) ವರ್ಗದಲ್ಲಿ ಪಾಸಾಗಿರಬೇಕು.

ಬ) **ಇತರೆ ಚಟುವಟಿಕೆಗಳು**: (Extra-Curricular Activities) :-ಇತರೆ ಚಟುವಟಿಕೆಗಳಲ್ಲಿ ಭಾಗವಹಿಸಿದ ಎಲ್ಲ ಪ್ರಮಾಣ ಪತ್ರಗಳನ್ನು ಸಲ್ಲಿಸುವುದು.

ಕ) ಸಂದರ್ಶನ:(Interview):- ಅರ್ಹ ವಿದ್ಯಾರ್ಥಿಗಳಿಗೆ ಮೌಖಿಕ ಸಂದರ್ಶನವನ್ನು ಸಂಬಂಧಿಸಿದ ಸಮಿತಿಯಿಂದ ನಡೆಸಲಾಗುವದು.

**Contd…2…**

3. **ಶಿಷ್ಯವೇತನ ಬಾಬತ್ತು ಮತ್ತು ಅವಧಿ:-**
ಆಯ್ಕೆಗೊಂಡ ವಿದ್ಯಾರ್ಥಿಗೆ ಪ್ರೊ. ಎ. ಎಂ. ಪಠಾಣ ಶಿಷ್ಯವೇತನ ದತ್ತಿ ನಿಧಿಯಿಂದ ಬರುವ ವಾರ್ಷಿಕ ಬಡ್ಡಿಯಿಂದ ಗರಿಷ್ಠ ರೂ. 10,000/- (ತಿಂಗಳಿಗೆ ರೂ.1,000/- ರಂತೆ 10 ತಿಂಗಳ ಅವಧಿಗೆ) ಇಲ್ಲವೇ ಈ ದತ್ತಿ ನಿಧಿಯಿಂದ ಬರುವ ಬಡ್ಡಿಯನ್ನಾಧರಿಸಿ ಸಮಿತಿ ನಿರ್ಧರಿಸುವ ಮೊತ್ತ ಯಾವುದು ಕಡಿಮೆಯೋ ಅಷ್ಟನ್ನು ಮಾತ್ರ ಶಿಷ್ಯವೇತನ ನೀಡಲಾಗುವದು.

4. **ಅರ್ಜಿ ಸಲ್ಲಿಸುವ ವಿಧಾನ:-**
1) ನಿಗದಿ ಪಡಿಸಿದ ಅರ್ಜಿಯನ್ನು ಶಿಷ್ಯವೇತನ ವಿಭಾಗದಿಂದ ಪಡೆದು, ಭರ್ತಿ ಮಾಡಿ, ಸಂಬಂಧಿಸಿದ ವಿಭಾಗದ ಮುಖ್ಯಸ್ಥರ ಸಹಿಯೊಂದಿಗೆ ದಿನಾಂಕ: 20-12-2022 ರೊಳಗಾಗಿ ಸಲ್ಲಿಸುವುದು.
2)ಅರ್ಜಿಯ ಜೊತೆಗೆ, (1)ಎಸ್.ಎಸ್.ಎಲ್.ಸಿ. (2)ಪಿ.ಯು.ಸಿ.(1st year and 2nd Year) (3)ಪದವಿ (1st semester to 6th semester) ಹಾಗೂ (4) ಸ್ನಾತಕೋತ್ತರ ಪ್ರಥಮ (1 ಮತ್ತು 2ನೇ ಸೆಮಿಸ್ಟರ್) ದೃಢೀಕೃತ ಅಂಕಪಟ್ಟಿ ಪ್ರತಿಗಳನ್ನು ಸಲ್ಲಿಸುವುದು ಹಾಗೂ ಇತರೆ ಚಟುವಟಿಕೆಗಳ (Extra-Curricular Activities) ಪ್ರಮಾಣ ಪತ್ರಗಳ ದೃಢೀಕೃತ ಪ್ರತಿಗಳನ್ನು ಅಗತ್ಯವಾಗಿ ಸಲ್ಲಿಸುವುದು.

5. ಆಯ್ಕೆ ಸಮಿತಿಯ ಶಿಫಾರಸ್ಸಿನ ಮೇಲೆ ವಿಶ್ವವಿದ್ಯಾಲಯ ಕೈಗೊಳ್ಳುವ ನಿರ್ಣಯವೇ ಅಂತಿಮವಾಗಿರುತ್ತದೆ.

ಕುಲಸಚಿವರು

ಪ್ರತಿ ಸಾದರಪೂರ್ವಕವಾಗಿ:-

1. ಎಲ್ಲ ಕಲಾ (**Languages, Music.**) ನಿಖಾಯದ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರುಗಳು, ಕ.ವಿ.ವಿ. ಧಾರವಾಡ, ಕ.ವಿ.ವಿ. ಸ್ನಾತಕೋತ್ತರ ಕೇಂದ್ರ ಕಾರವಾರ/ಹಾವೇರಿ/ಗದಗ ಹಾಗೂ ಕರ್ನಾಟಕ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯರ ಮಾಹಿತಿಗಾಗಿ ಕಳುಹಿಸಲಾಗಿದೆ. ಮುಂದುವರೆದು ಈ ವಿಷಯವನ್ನು 2022-23ನೇ ಸಾಲಿನಲ್ಲಿ ಅಂತಿಮ ವರ್ಷದ ಸ್ನಾತಕೋತ್ತರ ಪದವಿಯಲ್ಲಿ (3 ಮತ್ತು 4ನೇ ಸೆಮಿಸ್ಟರ) ಓದುತ್ತಿರುವ ವಿದ್ಯಾರ್ಥಿ/ನಿಗಳ ಗಮನಕ್ಕೆ ತಪ್ಪದೆ ತರಲು ಹಾಗೂ ಅರ್ಹ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸುವಂತೆ ತಿಳಿಸಲು ಕ್ರಮಕೈಗೊಳ್ಳಬೇಕೆಂದು ಕೋರಲಾಗಿದೆ.
2. ಪ್ರೊ. ಎ. ಎಂ. ಪಠಾಣ, ಸನ್ಮಾನ ಸಮೀತಿಯ ಸಂಯೋಜಕರು,
   ಅ) ಡಾ. ಕೆ. ಗೌಡರೆಡ್ಡಿ, ನಿವೃತ್ತ ಪ್ರಾಧ್ಯಾಪಕರು, ಕಲ್ಯಾಣ ನಗರ, ಧಾರವಾಡ.
   ಬ) ಪ್ರೊ. ಅಬ್ದುಲ್ ಕರೀಂ, ಮಾಜಿ ಸಿಂಡಿಕೇಟ್ ಸದಸ್ಯರು, ನವನಗರ, ಹುಬ್ಬಳ್ಳಿ ಇವರ ಮಾಹಿತಿಗಾಗಿ.
   ಇವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ.
3. ವಿತ್ತಾಧಿಕಾರಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ.
4. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
5. ಕುಲಸಚಿವರ ಆಪ್ತ ಸಹಾಯಕರು, ಕ.ವಿ.ವಿ. ಧಾರವಾಡ.
6. ನಿರ್ದೇಶಕರು ಐ.ಟಿ. ವಿಭಾಗ ಕ.ವಿ.ವಿ ಧಾರವಾಡ (ಸದರ ಮಾಹಿತಿಯನ್ನು ವಿಶ್ವವಿದ್ಯಾಲಯದ ವೆಬ್ ಸೈಟ್‌ನಲ್ಲಿ ಬಿತ್ತರಿಸುವ ಅಗತ್ಯ ಕ್ರಮಕ್ಕಾಗಿ)